ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	90
ಮಾನ್ಯ ಸದಸ್ಯರ ಹೆಸರು	ಶ್ರೀ ಪಿ.ಆರ್.ರಮೇಶ್ (ವಿಧಾನ ಪರಿಷತ್ತಿನ ಸದಸ್ಯರು)
ಉತ್ತರಿಸಬೇಕಾದ ದಿನಾಂಕ	21-09-2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ/ಖಾಸಗಿ ಆಸ್ಪತ್ರೆಗಳ ಸಂಖ್ಯೆ ಎಷ್ಟು;(ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯದಲ್ಲಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳ(ಉಪಕೇಂದ್ರ ಮತ್ತು ಆರೋಗ್ಯ ವಿಸ್ತರಣಾ ಕೇಂದ್ರ ಒಳಗೊಂಡಂತೆ) ಒಟ್ಟು ಸಂಖ್ಯೆ: 11757. ರಾಜ್ಯದಲ್ಲಿ ಒಟ್ಟು 24,721 ಖಾಸಗಿ ಆಸ್ಪತ್ರೆ / ಕ್ಲಿನಿಕ್‌ಗಳಿವೆ.
ಆ	ಆರೋಗ್ಯ ಸೇವೆಯ ಗುಣಮಟ್ಟ ಮತ್ತು ರೋಗಿಗಳ ಸುರಕ್ಷತೆಯ ಕುರಿತ National Accreditation Board for Hospital and Healthcare Providers (NABH) ಸಂಸ್ಥೆಯಿಂದ ಮಾನ್ಯತೆ ಪಡೆಯಲು ಸರ್ಕಾರಿ/ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರದಿಂದ ಮಾರ್ಗಸೂಚಿಗಳು ಅಥವಾ ಮಾನದಂಡಗಳೇನಾದರೂ ಜಾರಿಯಲ್ಲಿದೆಯೇ;	ಜಾರಿಯಲ್ಲಿವೆ.
ಇ	ಇಲ್ಲದಿದ್ದಲ್ಲಿ, ಈ ಮಾನ್ಯತೆಯ ಕುರಿತು ಸರ್ಕಾರದ ನಿಲುವೇನು; ಇದ್ದಲ್ಲಿ ಈ ಮಾನ್ಯತೆಯನ್ನು ಎಲ್ಲಾ ಆಸ್ಪತ್ರೆಗಳು ಪಡೆಯುವಂತೆ ಮಾಡಲು ಸರ್ಕಾರದ ಪ್ರಯತ್ನವೇನು;	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯಾವ ಆಸ್ಪತ್ರೆಗಳು NABH ಸಂಸ್ಥೆಯಿಂದ ಮಾನ್ಯತೆ ಪಡೆದಿರುವುದಿಲ್ಲ. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ಎನ್.ಕ್ಯೂ.ಎ.ಎಸ್ ಅನ್ನು ಅಂಗೀಕರಿಸಿದ್ದು, ಇಲಾಖೆಯ ಆಸ್ಪತ್ರೆಗಳನ್ನು ಹಂತಹಂತವಾಗಿ ಎನ್.ಕ್ಯೂ.ಎ.ಎಸ್ ಅಡಿಯಲ್ಲಿ ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ. ಇದರಡಿಯಲ್ಲಿ 18 ಜಿಲ್ಲಾ ಆಸ್ಪತ್ರೆಗಳು, 34 ಸಮುದಾಯ ಆರೋಗ್ಯ ಕೇಂದ್ರಗಳು, 76 24/7 ಪ್ರಾಥಮಿಕ ಆರೋಗ್ಯ
ಈ	ರಾಜ್ಯದಲ್ಲಿರುವ ಎಷ್ಟು ಸರ್ಕಾರಿ/ಖಾಸಗಿ ಆಸ್ಪತ್ರೆಗಳು National Accreditation Board for Hospital and Healthcare Providers (NABH) ಸಂಸ್ಥೆಯಿಂದ ಮಾನ್ಯತೆ ಪಡೆದಿರುತ್ತವೆ? (ವಿವರ	

	ನೀಡುವುದು)	ಕೇಂದ್ರಗಳು ಮತ್ತು 29 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಾನ್ಯತೆ ಪಡೆದಿವೆ. ಅನುದಾನದ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ National Accreditation Board for Hospital and Healthcare Providers (NABH) ಮಾನದಂಡಗಳನ್ವಯ ಆರೋಗ್ಯ ಸೇವೆಯ ಗುಣಮಟ್ಟ ಮತ್ತು ರೋಗಿಗಳ ಸುರಕ್ಷತೆ ಬಗ್ಗೆ ಸರ್ಕಾರದ ಬದ್ಧತೆ ಹೊಂದಿದೆ.

ಆಕುಕ 92 ಎಸ್‌ಬಿವಿ 2020

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು